ಆ ರಾತ್ರಿ ಗೆಳತಿಯರಿಬ್ಬರೂ ಮಲಗಿಕೊಂಡೇ ಮಾತಿನಲ್ಲಿ ತೊಡಗಿದ್ದರು. ಬೆಡ್‌ಲೈಟಿನ ಹಸಿರು ಬಣ್ಣ ರೂಮಿನ ತುಂಬಾ ಹರಡಿಕೊಂಡಿತ್ತು.

'ಋತು....ಯಾಕೋ ಒಂಥರಾ ಡಲ್ಲಾಗಿದ್ದಿಯಲ್ಲ, ನೀನು ಹೇಮಂತನ ಜೊತೆ ಬಂಗಲೆಯನ್ನು ಸುತ್ತಾಡಲು ಹೋಗುವಾಗ ಇದ್ದ ಸಂತೋಷ ಬರುವಾಗ ಇರ್ಲಿಲ್ಲ, ಏನಾಯ್ತೇ....?'

ರಮ್ಯ ಆತ್ಮೀಯತೆಯಿಂದ ಕೇಳಿದಾಗ ಋತುವಿಗೆ ಆಶ್ಚರ್ಯವಾಯಿತು. ಬಹುಶಃ ತಮ್ಮ ಪ್ರೀತಿಪಾತ್ರರಿಗಷ್ಟೇ ತಮ್ಮ ಮನಸ್ಸಿನ ನೋವು ನಲಿವುಗಳು ತಿಳಿದುಬಿಡುತ್ತದೋ ಏನೋ....ಬಂಗಲೆಯ ನಿಶ್ಯಬ್ದತೆಗೆ ಹೆದರುತ್ತಿದ್ದ ತನಗೆ ಸ್ನೇಹವೆಂದರೆ ಏನೆಂದು ತೋರಿಸಿ ಧೈರ್ಯ ತುಂಬಿದವಳು ಈ ರಮ್ಯಾಳೇ ಅಲ್ಲವೇ? ಇವಳಲ್ಲಿ ತನ್ನೆಲ್ಲಾ ಅಂತರಂಗದ ವಿಷಯಗಳನ್ನು ಹಂಚಿಕೊಂಡರೆ ತಪ್ಪಿಲ್ಲವೆನಿಸಿತು. ನಿಧಾನವಾಗಿ ಟೆರೇಸಿನಲ್ಲಿ ನಡೆದ ವಿಷಯವನ್ನು ವಿವರಿಸಿದಳು. ಜೊತೆಗೆ ಹೇಮಂತ ಕಲಾವತಿಯ ಮೇಲೆ ಅನುಮಾನ ಪಟ್ಟಿದ್ದನ್ನು ಹೇಳಲು ಮರೆಯಲಿಲ್ಲ.

ಸ್ವಲ್ಪ ಹೊತ್ತು ಮೌನವಾದಳು ರಮ್ಯ. ಅವಳಿಗೂ ಆಘಾತವಾಗಿರಬೇಕು.

'ಋತು....ಹೇಮಂತನ ಬಗ್ಗೆ ತಪ್ಪು ಹೇಳುವಂತಿಲ್ಲ, ಪತ್ತೆದಾರರೇ ಹಾಗಲ್ಲವೇ?..ಸಾಧ್ಯತೆಗಳ ಹತ್ತು ದಾರಿಗಳನ್ನು ನೋಡ್ತಿರ್ತಾರೆ, ಆದ್ರೆ ನಾವೂ ಯೋಚಿಸೋಣ, ಆಂಟಿ ನಿನ್ನ ಹತ್ರ ಯಾವತ್ತಾದ್ರೂ ಮನಸ್ಸಿಗೆ ಬೇಜಾರಾಗುವ ಹಾಗೆ ನಡೆದುಕೊಂಡಿದ್ದಾರಾ?' ಇಲ್ಲವೆನ್ನುವಂತೆ ತಲೆಯಾಡಿಸಿದಳು ಋತು.

ಹಾಗಾದರೆ ಬಂಗಲೆಯಲ್ಲಿ ಮತ್ಯಾರ ಮೇಲೆ ನಿಂಗೆ ಅನುಮಾನವಿದೆ?

ಋತು ಯೋಚಿಸತೊಡಗಿದಳು. ಸುಂದರಿ....ಆ ದಿನ ಚಿಕ್ಕಮ್ಮನ ಜೊತೆ ಸಹಜವಾಗಿ ಮಾತನಾಡಬೇಕೆಂದಾಗ ಸುಂದರಿ ನೋಡಿದ ತೀಕ್ಷ್ಣವಾದ ನೋಟ ನೆನಪಾಯಿತು. ಜೊತೆಗೆ ಹೇಮಂತನನ್ನು ಭೇಟಿಯಾಗಿ ಬರುವಾಗ ಚಂದ್ರಪ್ಪ ಬೆದರಿಕೆ ಹಾಕಿದ್ದು ನೆನಪಾಯಿತು. ಅಲ್ಲದೆ ಎಂಥ ಜರೂರಿ ಕೆಲಸವಿದ್ದರೂ ಸುಂದರಿ ರಾತ್ರಿಯ ವೇಳೆ ಬಂಗಲೆಗೆ ಬರುವವಳೇ ಅಲ್ಲ. ಹಾಗಿರುವಾಗ ಈ ದಿನ ಬಂದಿದ್ದಾಳೆಂದರೆ....ಅನುಮಾನ ಸುಂದರಿಯತ್ತಲೇ ಹೆಚ್ಚಾಗತೊಡಗಿತ್ತು.

ಈ ಎಲ್ಲ ವಿಷಯಗಳನ್ನು ರಮ್ಯಳಿಗೆ ವಿವರಿಸಿದಳು ಋತು.

'ನಿಜ ಋತು, ನಿನ್ನ ಯೋಚ್ನೆ ಸರಿಯಾಗಿಯೇ ಇದೆ, ಯಾವುದಕ್ಕೂ ಆ ಸುಂದರಿಯ ಮೇಲೆ ಕಣ್ಣಿಡು, ಯಾವುದಕ್ಕೂ ಹೆದರ್ಬೇಡ....' ಹೇಮಂತನಂತೆಯೇ ರಮ್ಯಾಳೂ ಧೈರ್ಯ ತುಂಬಿದಾಗ ಋತು ಗೆಲುವಾದಳು.

ಹೇಮಂತನಂತಹ ಸಂಗಾತಿ, ರಮ್ಯಳಂತಹ ಗೆಳತಿ ಜೊತೆಗಿದ್ದರೆ ತನಗೆ ಯಾವ ಭಯವೂ ಇಲ್ಲವೆನಿಸಿತು.

'ಅದಿರ್ಲಿ...ಅಷ್ಟು ಹೊತ್ತು ಏಕಾಂತವಾಗಿದ್ರಲ್ಲಾ, ಏನಾದ್ರೂ ರೊಮ್ಯಾನ್ಸ್...' ರಮ್ಯ ಕೀಟಲೆ ಮಾಡಿದಾಗ ಋತು ನಾಚಿ ಕೆಂಪೇರಿದಳು.

'ಏ ಹೋಗೇ, ಅವೆಲ್ಲಾ ಏನಿಲ್ಲ, ಹೇಮಂತ ತುಂಬಾ ಒಳ್ಳೆಯವ್ನು ಗೊತ್ತಾ?'

'ಕೆಲವು ಸಲ ಹುಡ್ಗೀರಿಗೆ ಅವರು ಮೆಚ್ಚಿದವನ ಒಳ್ಳೇತನ ಇಷ್ಟ ಆಗಲ್ಲ, ಪೋಲಿತನ ಇಷ್ಟ ಆಗುತ್ತೆ ಗೊತ್ತಾ?' ಮತ್ತೆ ರಮ್ಯ ರೇಗಿಸಿದಾಗ ಋತು ಅವಳ ತಲೆಗೊಂದು ಮೊಟಕಿದಳು.

'ಹೌದಮ್ಮಾ ಮಹರಾಯ್ತಿ, ಹೇಮಂತ ಪೋಲಿ ಅಂತ್ಲೇ ಅಂದ್ಕೋ. . ಏನೀಗ. .' ಎಂದಳು.

ಗೆಳತಿಯರು ಮತ್ತೆ ಬಹಳ ಹೊತ್ತು ಹರಟೆಯಲ್ಲಿ ಮುಳುಗಿ ಹೋದರು.

'ರಮ್ಯ....ನೀನು ಬಂಗಲೆಗೆ ಯಾವಾಗ ಬಂದ್ರೂ ನಿನ್ನ ಎಲ್ಲಿಯೂ ಕರೆದುಕೊಂಡು ಹೋಗೋಕೆ ಆಗ್ತಿಲ್ಲ, ಬರೀ ಕೆರೆದಂಡೆಯೊಂದೇ ನಮ್ಮ ಪಿಕ್ನಿಕ್ ಸ್ಪಾಟ್ ಆಗಿದೆ, ನಾಳೆ ಹೇಗಿದ್ರೂ ಭಾನುವಾರ, ನಾವೆಲ್ಲಾ ಲಾಲ್‌ಬಾಗಿಗೆ ಹೋಗ್ಗೋಣ್ವಾ, ಹೋಗದೆ ತುಂಬಾ ವರ್ಷಗಳಾದ್ವು, ಪಪ್ಪ, ಚಿಕ್ಕಮ್ಮನನ್ನೂ ಕರೆದುಕೊಂಡು ಹೋಗೋಣ....'

'ಮತ್ತೆ ಹೇಮಂತ....' ಹುಬ್ಬೇರಿಸಿ ಕೇಳಿದಳು ರಮ್ಯ.

'ಹೌದಲ್ವಾ, ಒಂದು ಕೆಲ್ಸ ಮಾಡೋಣ, ಹೇಮಂತ ಬರ್ತಾನಾ ಅಂತ ಕೇಳಿ ನೋಡೋಣ, ಬಂದ್ರೆ ನಾವೆಲ್ಲಾ ಸೇರಿಯೇ ಹೋಗ್ಬೋದು..' ಹಿಗ್ಗಿನಿಂದ ಹೇಳಿದಳು ಋತು.

ಗೆಳತಿಯರು ಮಾತು ಮುಗಿಸಿ ಮಲಗಿಕೊಳ್ಳುವಾಗ ಮಧ್ಯರಾತ್ರಿಯೂ ಕಳೆದು ಹೋಗಿತ್ತು. ಬೇಗ ಏಳಲು ಮೊಬೈಲಿನಲ್ಲಿ ಅಲಾರಾಂ ಇಟ್ಟು, ತಮ್ಮೊಂದಿಗೆ ಮರುದಿನ ಬರಬೇಕೆಂದು ಹೇಮಂತನಿಗೆ ಮೆಸೇಜ್ ಮಾಡಿ ಋತು ಮಲಗಿಕೊಂಡಳು.

ಕೋಟೆ ಬಂಗಲೆ ಉನ್ನತಿಯಿಂದ ಬೈಕಿನಲ್ಲಿ ಹೊರಟ ಹೇಮಂತನ ಮನಸ್ಸು ಹಗುರಾಗಿತ್ತು. ಋತುವಿನ ಪ್ರೀತಿ ಅವನಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸಿದ್ದರೆ, ಬಂಗಲೆಯವರ ಪ್ರೀತಿ ವಿಶ್ವಾಸಕ್ಕೆ ಮನಸ್ಸು ಮಾರು ಹೋಗಿತ್ತು. ಆದರೂ ಟೆರೇಸಿನ ಪ್ರಕರಣ ಎಲ್ಲೋ ಒಂದೆಡೆ ಚುಚ್ಚತೊಡಗಿತ್ತು. ಅಲ್ಲಿ ಎಲ್ಲವೂ ಸರಿಯಾಗಿದೆ ಎಂದುಕೊಂಡರೂ ಎಲ್ಲವೂ ಸರಿಯಾಗಿಲ್ಲವೆಂಬ ಅನಿಸಿಕೆ. ಅವನ ಆರನೆಯ ಇಂದ್ರಿಯ ಅಪಾಯದ ಕೆಂಪು ದೀಪವನ್ನು ತೋರಿಸತೊಡಗಿತ್ತು. ಆದರೆ ಅದ್ಯಾವ ಅಪಾಯ?....ಸದ್ಯಕ್ಕೆ ಅವನೇನೂ ಯೋಚಿಸಲು ಸಾಧ್ಯವಾಗಲಿಲ್ಲ.

ಅವನ ಬೈಕು ನಿರ್ಜನ ರಸ್ತೆಯಲ್ಲಿ ವೇಗದಿಂದ ಸಾಗತೊಡಗಿತ್ತು. ಅರ್ಧಗಂಟೆಗೆಲ್ಲಾ ಮನೆಯ ಸಮೀಪಕ್ಕೆ ಬಂದಿದ್ದ ಹೇಮಂತ. ಬಲ ತಿರುವನ್ನು ಪಡೆದುಕೊಂಡು ಉದ್ದಕ್ಕೆ ಸಾಗಿದರೆ ಮನೆಯನ್ನು ತಲುಪಬಹುದೆನ್ನುವಾಗಲೇ ದಾರಿಗಡ್ಡವಾಗಿ ಕಲ್ಲುಗಳನ್ನು ಪೇರಿಸಿಟ್ಟಿದ್ದು ಕಾಣಿಸಿತು. ಈಗ್ಯಾವ ರಸ್ತೆ ರಿಪೇರಿ ನಡೆಯುತ್ತಿದೆ....ಅವನಿಗೆ ಗೊತ್ತಿದ್ದ ಹಾಗೆ ಅಂಥ ರಿಪೇರಿಗಳ್ಯಾವುವೂ ನಡೆದಿರಲಿಲ್ಲ. ಆದರೂ ಕಲ್ಲನ್ನೇಕೆ ಜೋಡಿಸಿದ್ದಾರೆ?....

ಯೋಚಿಸುತ್ತಲೇ ಬೈಕಿನಿಂದ ಕೆಳಗಿಳಿದ ಅವನ ಮೇಲೆ ವ್ಯಕ್ತಿಯೊಂದು ಹಿಂಬದಿಯಿಂದ ದಾಳಿ ಮಾಡಿತು.

12

ಏಕಾಏಕಿ ಹೇಮಂತನ ಮೇಲೆ ವ್ಯಕ್ತಿಯೊಂದು ದಾಳಿ ಮಾಡಿತ್ತು. ಇದನ್ನು ನಿರೀಕ್ಷಿಸಿರದ ಹೇಮಂತ ದೊಪ್ಪನೆ ಕೆಳಬಿದ್ದ. ಹಣೆಗೆ ಕಲ್ಲೊಂದು ಚುಚ್ಚಿ ಛಿಲ್ಲನೆ ರಕ್ತ ಚಿಮ್ಮಿತು. ತಕ್ಷಣ ಸಾವರಿಸಿಕೊಂಡು ಮೇಲೆದ್ದವನ ಮೇಲೆ ಮತ್ತದೇ ವ್ಯಕ್ತಿ ದಾಳಿ ಮಾಡಿತು. ಕಪ್ಪಗಿನ, ದಪ್ಪ ದೇಹದ ಆಜಾನುಬಾಹು....ಅವನ ಕಪಿಮುಷ್ಠಿಯಲ್ಲಿ ಒಂದು ಕ್ಷಣ ಹೇಮಂತನ ತೋಳುಗಳು ಸಿಲುಕಿಹೋದರೂ ಸಾವರಿಸಿಕೊಂಡು ತಿರುಗಿ ಆ ವ್ಯಕ್ತಿಯ ಮುಖದ ಮೇಲೆ ಮುಷ್ಠಿಯ ಪ್ರಹಾರ ಮಾಡಿದ. ಆತನ ಮೂಗಿನಿಂದ ರಕ್ತ ಸೋರತೊಡಗಿತ್ತು. ಈ ಸ್ಥಿತಿಯಲ್ಲೂ ಹೋರಾಟ ನಿಲ್ಲಲಿಲ್ಲ. ಕೊನೆ ಕೊನೆಗೆ ಆ ದಢಿಯ ನಿತ್ರಾಣನಾದ. ಹೋರಾಟದ ಕಸುವು ಮುಗಿಯಿತೆನ್ನುವಾಗ ಪಕ್ಕದ ಮೈನ್ ರೋಡಿನಲ್ಲಿ ಆಂಬುಲೆನ್ಸಿನ ಸದ್ದು ಕೇಳಿ ಬಂತು. ಹೇಮಂತನ ಗಮನ ಒಂದು ಕ್ಷಣ ಅತ್ತ ಸರಿದಾಗ ಆ ವ್ಯಕ್ತಿ ಅವನನ್ನು ನೂಕಿ ಕತ್ತಲಿನಲ್ಲಿ ಮರೆಯಾಗಿ ಓಡಿತು. ಗಾಯವಾದ ಹಣೆಗೆ ಕರ್ಚೀಫಿನಿಂದ ಪಟ್ಟಿಯನ್ನು ಕಟ್ಟಿಕೊಂಡ ಹೇಮಂತ ಆ ವ್ಯಕ್ತಿಗಾಗಿ ಅತ್ತಿತ್ತ ಹುಡುಕಾಡಿದ. ಆದರೆ ರಸ್ತೆಯಲ್ಲಿ ರಕ್ತದ ಹನಿಗಳಲ್ಲದೆ ಬೇರೇನೂ ಕಾಣಲಿಲ್ಲ. ತನ್ನ ಮೇಲೆ ದಾಳಿ ಮಾಡಲು ಕಾರಣವೇನಿರಬಹುದು?ಯೋಚಿಸತೊಡಗಿದ. ಜ್ಞಾನದೇಗುಲ ಕಾಲೇಜಿನ ಕೊಲೆಯ ತನಿಖೆಗೆ ತಾನು ಸಹಾಯ ಮಾಡುತ್ತಿದ್ದೇನೆ. ಅದರಿಂದಲೇ ಇಂದಿನ ಘಟನೆ ನಡೆದಿರಬಹುದೇ?....ಇದ್ದರೂ ಇರಬಹುದೆನಿಸಿತು ಅವನಿಗೆ. ತಾನಿನ್ನು ಏಕಾಂಗಿಯಾಗಿ ಓಡಾಡುವಾಗ ತನ್ನ ಪಿಸ್ತೂಲನ್ನು ಜೊತೆಗಿಟ್ಟುಕೊಳ್ಳುವುದು ಸೂಕ್ತವೆನಿಸಿತು.

ಮನೆ ಹತ್ತಿರದಲ್ಲೇ ಇದ್ದುದರಿಂದ ಬೇಗನೇ ತಲುಪಿದ. ಮಗನಿಗಾಗಿ ಕಾಯುತ್ತಾ ನಿದ್ರಿಸದೆ ವರಾಂಡದಲ್ಲೇ ಕುಳಿತಿದ್ದ ಹೇಮಂತನ ತಾಯಿ ರುಕ್ಮಿಣಿ ಬಾಗಿಲು ತೆರೆದವರು ಒಂದು ಕ್ಷಣ ಮಗನನ್ನು ನೋಡಿ ಬೆಚ್ಚಿದರು.

ಹೇಮಂತನ ಮುಖ, ಅವನ ತೊಟ್ಟಿದ್ದ ತಿಳಿಹಳದಿ ಟೀ ಶರ್ಟ್ ಪೂರ್ತಿ ರಕ್ತಮಯವಾಗಿತ್ತು. ಹಣೆಗೆ ಪಟ್ಟಿಯನ್ನು ಬೇರೆ ಕಟ್ಟಿಕೊಂಡಿದ್ದರಿಂದ ಮತ್ತಷ್ಟು ಆತಂಕಗೊಂಡರು.

'ಏನಾಯ್ತೋ ಹೇಮಂತ....ಇದೇನು ನಿನ್ನ ಅವಸ್ಥೆ...?' ಎನ್ನುತ್ತಲೇ ಅವನನ್ನು ಬರಮಾಡಿಕೊಂಡರು.

ಮಗ ಋತುವಿನ ಬಂಗಲೆಗೆ ಹೋಗಿ ಬರುತ್ತೇನೆಂದು ಹೇಳಿಯೇ ಹೋಗಿದ್ದ. ಹಾಗೆ ಹೋದವನಿಗೆ ಹಿಂದಿರುಗಿ ಬರುವಾಗ ಏನಾಯಿತು?

'ಅಮ್ಮಾ ಹೆದರ್ಬೇಡ, ಈಗ ಮನೆಯ ಹತ್ತಿರ ಬರೋವಾಗ ಯಾವನೋ ಒಬ್ಬ ಅಟ್ಯಾಕ್ ಮಾಡಿದ, ಚೆನ್ನಾಗಿ ತದಕಿ ಕಳ್ಸಿದೀನಿ, ಇನ್ನು ಅವನು ನನ್ನ ತಂಟೆಗೆ ಬರಲ್ಲ ಬಿಡು..' ಎಂದು ಹೆದರಿದ ತಾಯಿಗೆ ಸಮಾಧಾನ ಮಾಡಿದ.

'ಏನೋಪ್ಪ, ಈ ಅಪರಾಧಿಗಳನ್ನು ಕಂಡು ಹಿಡಿಯೋ ಪತ್ತೆದಾರನ ಕೆಲ್ಸ ನಿಂಗೆ ಬೇಡವಾಗಿತ್ತೇನೋ, ನನ್ನ ಮಾತನ್ನು ನೀನೆಲ್ಲಿ ಕೇಳ್ತಿಯಾ? ದಿನಾ ನಿನ್ನ ಬಗ್ಗೆ ಯೋಚ್ನೆ ಮಾಡೋದೇ ಆಗಿದೆ ನಂಗೆ.' ರುಕ್ಮಿಣಿಯವರು ಅಳತೊಡಗಿದಾಗ ಹೇಮಂತ ಸಮಾಧಾನಿಸಿದ.

'ಅಮ್ಮಾ, ಈ ಜಾಬ್‌ನಲ್ಲಿ ಇವೆಲ್ಲಾ ಕಾಮನ್ ಅಲ್ವಾ, ಏನೂ ಆಗಲ್ಲ,